ಪತ್ರಿಕಾ ತುಣುಕುಗಳು
PAPER CLIPPINGS

ವಿಭಾಗ / ವಿಷಯ : DEPARTMENT / SUBJECT

ಪತ್ರಿಕೆಯ ಹೆಸರು : NAME OF THE NEWS PAPER:  ದಿನಾಂಕ : DATE : 25/12/2019

# ಜನಗಣತಿ ಎನ್‌ಪಿಆರ್‌ಗೆ ಮುನ್ನುಡಿ

- ಕೇಂದ್ರ ಸಂಪುಟ ಸಭೆಯಿಂದ ಹಣ ಮಂಜೂರು
- ಗ್ರಾಮ, ನಗರ, ಜಿಲ್ಲೆ, ರಾಜ್ಯ, ರಾಷ್ಟ್ರ ಮಟ್ಟದ ಪಟ್ಟಿ
- ಆಗಸ್ಟ್‌ನಲ್ಲಿ ಹೊರಡಿಸಲಾಗಿದ್ದ ಗೆಜೆಟ್ ಅಧಿಸೂಚನೆ

ನವದೆಹಲಿ: ಮುಂದಿನ ವರ್ಷ ದೇಶಾದ್ಯಂತ ಜನಗಣತಿ (ಎನ್‌ಪಿಆರ್) ನಡೆಸಲಾಗುತ್ತಿದ್ದು, ಇದು ರಾಷ್ಟ್ರೀಯ ನಾಗರಿಕರ ನೋಂದಣಿ (ಎನ್‌ಆರ್‌ಸಿ)ಗೆ ಮುನ್ನುಡಿ ಯಾಗಲಿದೆ. ಈ ಪ್ರಕ್ರಿಯೆಗೆ ಕೇಂದ್ರ ಸಚಿವ ಸಂಪುಟ ಸಭೆ 3941.35 ಕೋಟಿ ರೂ. ಮಂಜೂರು ಮಾಡಿದೆ.

ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದಲ್ಲಿ ನಡೆದ ಸಂಪುಟ ಸಭೆ ನಂತರ ಮಾತನಾಡಿದ ಸಚಿವ ಪ್ರಕಾಶ್ ಜಾವಡೇಕರ್, ಜನಗಣತಿ ಅಥವಾ ರಾಷ್ಟ್ರೀಯ ಜನಸಂಖ್ಯಾ ನೋಂದಣಿ (ಎನ್‌ಪಿಆರ್) ನವೀಕರಣ ಪ್ರಕ್ರಿಯೆಯಲ್ಲಿ ದೇಶದಲ್ಲಿ ವಾಸಿಸುವ ಪ್ರತಿಯೊಬ್ಬರನ್ನೂ ಪಟ್ಟಿ ಮಾಡಲಾಗುವುದು ಎಂದು ತಿಳಿಸಿದರು. ಕಳೆದ ಆರು ತಿಂಗಳಿನಿಂದ ಯಾರು ದೇಶದಲ್ಲಿ ವಾಸ ಮಾಡುತ್ತಿದ್ದಾರೋ ಮತ್ತು ಮುಂದಿನ ಆರು ತಿಂಗಳು ಯಾರು ವಾಸ ಮಾಡಲು ಇಚ್ಛಿಸುತ್ತಾರೋ ಅಂಥ ನಿವಾಸಿಗಳ ಪಟ್ಟಿ ಮಾಡಲಾಗುತ್ತದೆ. ಇದಕ್ಕೆ ಯಾವುದೇ ದಾಖಲಾತಿಗಳನ್ನು ಒದಗಿಸುವ ಅಗತ್ಯವಿರುವುದಿಲ್ಲ ಎಂದು ಜಾವಡೇಕರ್ ಹೇಳಿದರು.

ಹತ್ತು ವರ್ಷಕ್ಕೊಮ್ಮೆ ನಡೆಸುವ ಜನಗಣತಿಯನ್ನು ಭಾರತದಲ್ಲಿ ಇದುವರೆಗೆ 15 ಬಾರಿ ಮಾಡಲಾಗಿದೆ. ಸ್ವಾತಂತ್ರ್ಯಪೂರ್ವದಲ್ಲಿ ಎಂಟು ಬಾರಿ ಬ್ರಿಟಿಷರು ನಡೆಸಿದ್ದಾರೆ. ಈ ಬಾರಿ ನಡೆಯಲಿರುವ 16ನೇ ಜನಗಣತಿ ಅತ್ಯಂತ ಸುಲಭವಾಗಿ ಮಾಡಲು ತಾಂತ್ರಿಕ ನೆರವನ್ನು ಪಡೆದಿರುವುದಾಗಿ ಜಾವಡೇಕರ್ ತಿಳಿಸಿದರು. ಎನ್‌ಪಿಆರ್‌ನಲ್ಲಿ ಯಾರ ಹೆಸರಾದರೂ ಬಿಟ್ಟುಹೋದಲ್ಲಿ ಅವರ ಪೌರತ್ವಕ್ಕೆ ಯಾವುದೇ ಧಕ್ಕೆಯಾಗುವುದಿಲ್ಲ ಎಂದು ಕೇಂದ್ರ ಗೃಹಸಚಿವ ಅಮಿತ್ ಶಾ ಸ್ಪಷ್ಟಪಡಿಸಿದ್ದಾರೆ.

ಎನ್‌ಪಿಆರ್ ಪಟ್ಟಿಯನ್ನು ಪೌರತ್ವ ಕಾಯ್ದೆ, 1955ರ ಅನ್ವಯ ಗ್ರಾಮ, ಉಪನಗರ, ನಗರ, ಜಿಲ್ಲೆ, ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಸಿದ್ಧಗೊಳಿಸಲಾಗುವುದು. ಮುಂದಿನ ವರ್ಷ ಏಪ್ರಿಲ್‌ನಿಂದ ಸೆಪ್ಟೆಂಬರ್ ಅವಧಿಯಲ್ಲಿ ಅಸ್ಸಾಂ ಹೊರತುಪಡಿಸಿ ಉಳಿದೆಲ್ಲ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಜನಗಣತಿ ಮಾಡಲಾಗುತ್ತದೆ ಎಂದು ಜನಗಣತಿ ಆಯುಕ್ತರ ವೆಬ್‌ಸೈಟ್‌ನಲ್ಲಿ ತಿಳಿಸಲಾಗಿದೆ. ಇದಕ್ಕಾಗಿ ಆಗಸ್ಟ್ ತಿಂಗಳಿನಲ್ಲಿ ಗೆಜೆಟ್ ನೋಟಿಫಿಕೇಶನ್ ಹೊರಡಿಸಲಾಗಿತ್ತು. ಜನಗಣತಿ ಮಾಹಿತಿ ಆಧಾರದ ಮೇಲೆ ಅಭಿವೃದ್ಧಿ ಯೋಜನೆಗಳನ್ನು ಸರ್ಕಾರಗಳು ರೂಪಿಸುತ್ತವೆ. ಸರ್ಕಾರದ ಯೋಜನೆಗಳ ಫಲಾನುಭವಿಗಳನ್ನು ಗುರುತಿಸಲು ಎನ್‌ಪಿಆರ್ ನೆರವಾಗಲಿದೆ.